**Q.P. Code – 50341**

## ತೃತೀಯ ಬಿ.ಎ. ಪದವಿ ಪರೀಕ್ಷೆ

## ಅಕ್ಟೋಬರ್/ನವೆಂಬರ್ 2015

## (ದೂರ ಶಿಕ್ಷಣ)

## ಕನ್ನಡ ಐಚ್ಛಿಕ ಪತ್ರಿಕೆ – ೫

## (DAC 430) – ಹಳಗನ್ನಡ ವ್ಯಾಕರಣ ಮತ್ತು ಕನ್ನಡ ಭಾಷೆಯ ಚರಿತ್ರೆ

*ಸಮಯ : 3 ಗಂಟೆಗಳು]* *[ಗರಿಷ್ಠ ಅಂಕಗಳು : 70/80*

'ಅ' – ವಿಭಾಗ

(ಹಳಗನ್ನಡ ವ್ಯಾಕರಣ)

1. ಕೆಳಗಿನ **ಒಂದು** ಸೂತ್ರಕ್ಕೆ ವ್ಯಾಖ್ಯಾನ ಬರೆಯಿರಿ : **1 × 6 = 06**

(೧) ವರ್ಗ ದ್ವಿತೀಯ ವರ್ಣ
ವರ್ಗ ಚತುರ್ಥಾಕ್ಷರಂ ಮಹಾಪ್ರಾಣಮವಂ
ಮಾರ್ಗ ವಿದರ್ ಸಂಖ್ಯೆಯೊಳಂ
ಭೋರ್ಗರೆವನುಕೃತಿಯೊಳಂ ಪ್ರಯೋಗಿಸುತಿರ್ಪರ್

(೨) ಸ್ವರಮಿದಿರೊಳರೆ ವಿಭಕ್ತಿ
ಸ್ವರಕಂ ಪ್ರಕೃತಿ ಸ್ವರಕ್ಕು ಮಕ್ಕುಂಲೋಪಂ
ವರ ಸಂಸ್ಕೃತ ಕರ್ಣಾಟಕ ಮೆ
ರಡ ಱೊಳಂ ನಾಮರೂಢಿಯಱಿಯದ ಪಕ್ಷಂ

2. ಕೆಳಗಿನ ಸೂತ್ರ ಭಾಗಗಳಲ್ಲಿ **ಎರಡಕ್ಕೆ** ಉದಾಹರಣೆಯೊಂದಿಗೆ ವಿವರಿಸಿ : **2 × 3 = 06**

(೧) ಪಂಚ ವಿಧಂ ತಾನೆಂದು ತಿಳಿಪುವರ್ ಶುದ್ಧಗೆಯಂ

(೨) ಇವು ವರ್ಣಾವೃತ್ತಿಗೆ ಸಲ್ವುವು ಸಂದು ಪ್ರಾಸದೆಡೆಗೆ ಸಲ್ಲವು

(೩) ಕರಡೆಯ ಗಿರ್ಗಟದ ದನಿಯಮೊಲಮರವವೆಂದಂ

(೪) ಸಮ ಸಂಸ್ಕೃತ ವೆಸರನಿಟ್ಟು ಲಿಂಗಂ ಮಾೞ್ಪರ್

3. ಕೆಳಗಿನ **ಎರಡರ** ವ್ಯಾಕರಣ ವಿಶೇಷಗಳನ್ನು ಬರೆಯಿರಿ : **2 × 3 = 06**

(೧) ಅಮಳ್ಗಳ್ ನಯಗುಣ ವಿಕ್ರಮದಮಳ್ಗಳ್

(೨) ಅಮರಾಂಗನೆಯರ್ ಜೋಯೆಂದು ಪಾಡಿದರ್

(೩) ಅಯ್ಯೋ ಅಕ್ಕಟಾ ಇಂದ್ರಂಗೆ ಕೇಡಾಯ್ತೆ

(೪) ತಿಳಿಗೊಳದಿಂದೆ ಪಾಱಿದುವು ಹಂಸಕುಳಂ



ಪು.ತಿ.ನೋ.

4. **ಎರಡಕ್ಕೆ** ಟಿಪ್ಪಣಿ ಬರೆಯಿರಿ : **2 × 2 = 04**

(೧) ಕನ್ನಡದಲ್ಲಿ ಮಹಾಪ್ರಾಣಗಳು

(೨) ದ್ವಿವಚನ

(೩) ಕ್ರಿಯಾಸಮಾಸ

(೪) ಆಖ್ಯಾತ ಪ್ರತ್ಯಗಳು

5. **ಎರಡು** ಪ್ರಶ್ನೆಗಳಿಗೆ ದೀರ್ಘವಾಗಿ ಉತ್ತರಿಸಿ : **2 × 9 = 18**

(೧) 'ಅಚ್ಚಗನ್ನಡದಲ್ಲಿ ನಲವತ್ತೇಳು ಅಕ್ಷರಗಳಿವೆ' – ಎಂಬ ಕೇಶಿರಾಜನ ಹೇಳಿಕೆಯನ್ನು ವಿವರಿಸಿ.

(೨) ಶಿಥಿಲ ದ್ವಿತ್ವ ಎಂದರೇನು? ಅದು ಬರುವ ಸಂದರ್ಭಗಳನ್ನು ಕುರಿತು ಬರೆಯಿರಿ.

(೩) ಪ್ರಕೃತಿ ಭಾವ ಎಂದರೇನು? ಅದು ಬರುವ ಸಂದರ್ಭಗಳನ್ನು ಉದಾಹರಣೆಯೊಂದಿಗೆ ತಿಳಿಸಿ.

(೪) ಕರ್ಮಧಾರಯ ಸಮಾಸ ಮತ್ತು ದ್ವಿಗು ಸಮಾಸಗಳನ್ನು ಉದಾಹರಣೆಯೊಂದಿಗೆ ವಿವರಿಸಿ.

ಆ – ವಿಭಾಗ

(ಕನ್ನಡ ಭಾಷೆಯ ಚರಿತ್ರೆ)

6. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **2 × 8 = 16**

(೧) ಭಾಷೆ ಎಂದರೇನು? ವಿವಿಧ ವಿದ್ವಾಂಸರ ಹೇಳಿಕೆಯೊಡನೆ ಸ್ವರೂಪ ಮತ್ತು ಲಕ್ಷಣವನ್ನು ತಿಳಿಸಿ.

(೨) ಕನ್ನಡ ಭಾಷೆಯ ವಿವಿಧ ಘಟ್ಟಗಳನ್ನು ಕುರಿತು ಬರೆಯಿರಿ.

(೩) ಉಪಭಾಷೆ ಎಂದರೇನು? ಉಪಭಾಷೆಗಳುಂಟಾಗಲು ಕಾರಣಗಳನ್ನು ವಿವರಿಸಿ.

7. **ಎರಡನ್ನು** ಕುರಿತು ಸಂಕ್ಷಿಪ್ತವಾಗಿ ವಿವರಿಸಿ : **2 × 4 = 08**

(೧) ಕನ್ನಡ ಶಬ್ದದ ವ್ಯುತ್ಪತ್ತಿ

(೨) ದ್ರಾವಿಡ ಭಾಷಾ ಪರಿವಾರ

(೩) ಕನ್ನಡದಲ್ಲಿ ಲಿಂಗ ವಿಭಕ್ತಿ

8. **ಮೂರಕ್ಕೆ** ಭಾಷಾ ವಿಜ್ಞಾನದ ದೃಷ್ಟಿಯಿಂದ ಟಿಪ್ಪಣಿ ಬರೆಯಿರಿ : **3 × 2 = 06**

(೧) ಅಮ್ಮ

(೨) ಅಡಗೂಲಜ್ಜಿ

(೩) ತಿಂಡಿ

(೪) ಹಾಲುಕೀರು

(೫) ಕಂತ್ರಿ

9. **ಎರಡು** ಪ್ರಶ್ನೆಗಳಿಗೆ ಉತ್ತರಿಸಿ : **2 × 5 = 10**

(**80** ಅಂಕಗಳ ಸ್ಕೀಮ್‌ನವರಿಗಾಗಿ **ಕಡ್ಡಾಯ** ಪ್ರಶ್ನೆ) :

(೧) ಭಾಷೆಯ ಉಗಮ ಮತ್ತು ವಿಕಾಸ ಸಂಕ್ಷಿಪ್ತವಾಗಿ ತಿಳಿಸಿ.

(೨) ಪ್ರಾದೇಶಿಕ ಉಪಭಾಷೆಗಳನ್ನು ಕುರಿತು ಬರೆಯಿರಿ.

(೩) ಕನ್ನಡದಲ್ಲಿ ಪಂಚಮಿ ವಿಭಕ್ತಿಯ ಚರ್ಚೆ.

---